ಮಾವಿನ ಹಣ್ಣಿನ ಸಾಸ್ಮೆಯ ದಿನಗಳಲ್ಲಿ ದಿನಾ ಉಣ್ಣುವುದರ ದುಪ್ಪಟ್ಟು ಅನ್ನ ಗಂಟಲಲ್ಲಿ ಇಳಿಯುತ್ತದೆ. ಹಲಸಿನ ಹಣ್ಣಿನ ಕಡಬು, ಅಪ್ಪೆಹುಳಿ, ಸಾಸ್ಮೆ, ಅಪ್ಪನ ಮನೆಯಲ್ಲಿ ತಿಂದ ಮಾವಿನ ಹಣ್ಣಿನ ಸೀಕರಣೆ ಪುರಿಗಳನ್ನೆಲ್ಲ ಜರೆಯುತ್ತ ಪಲಕ ಹಾಕಲು ಬರದಿದ್ದದ್ದಕ್ಕೆ ಇವೇ ಕಾರಣ ಎಂದು ಕೇಳುವವರ್‍ಯಾರಿಲ್ಲದಿದ್ದರೂ ವಟಗುಟ್ಟಿದಳು.

ಕಳೆದ ವರ್ಷ ಈ ದಿನಗಳಲ್ಲಿ ಎಲ್ಲವೂ ಸರಿಯಾಗಿಯೇ ಇತ್ತು. ವೇಣು ದಿನಕ್ಕೊಮ್ಮೆ ಗಿರಿಜತ್ತಿಗೆಗೆ ಫೋನು ಮಾಡದಿದ್ದರೂ, ರಾಧಾಳಿಗೆ ಮಾತ್ರ ಪ್ರತಿದಿನ ಅರ್ಧ ತಾಸಿನ ಫೋನು ಮಾಡಿಯೇ ಮಾಡುತ್ತಿದ್ದ. ಫೋನು – ಮೊಬೈಲುಗಳೆಲ್ಲ ತೀರ ಈಗೀಗಿನದು ಎಂದಾದರೂ ಕಾಲೇಜು ಅಂತ ವೇಣು ಮೈಸೂರು ಸೇರಿದ ಕಾಲದಲ್ಲೇ ವಾರಕ್ಕೊಂದು ಪತ್ರ ಕಾಡ್ಮನೆಯಿಂದ ಮೈಸೂರಿಗೆ, ಮೈಸೂರಿನಿಂದ ಕಾಡ್ಮನೆಗೂ ರವಾನೆಯಾಗುತ್ತಿತ್ತು. ಯಾರ ಕಡೆಯಿಂದಲೂ ಇದಕ್ಕೆ ವಿರೋಧವೇನಿರಲಿಲ್ಲ. ಕೆಲವೊಮ್ಮೆ ಗಿರಿಜತ್ತಿಗೆಯೇ ರಾಧಾಳಿಗೆ ಹೇಳಿ ತನ್ನ ಮಗ ವೇಣುವಿಗೆ ಪತ್ರ ಬರೆಸಿದ್ದೂ ಉಂಟು.

**ಮನೆಗೆ ಬಂದು 'ನಿನ್ನ ಸೊಸೆ ಎಂದರೆ ಸೊಸೆ ಮಾರಾಯ್ತಿ, ಗಂಡನಾಗುವವನಿಗಿಂತ ಅತ್ತೆಯನ್ನೇ ಹಚ್ಚಿಕೊಂಡುಬಿಟ್ಟಿದ್ದಾಳೆ. ಪಾಪ ನಮ್ಮ ವೇಣು' ಎಂದು ಉಬ್ಬಿಸಿ ಸಿಹಿ ತಿಂದು ಹೋಗುತ್ತಿದ್ದ ಶೇಖರ... ಈಗ ತಾನೇ ರಾಧಾಳನ್ನು ಮದುವೆಯಾಗಲು ಒಪ್ಪಿದ್ದು ಎಲ್ಲಿಯ ನ್ಯಾಯ?**

ಹಳೆಯದನ್ನೆಲ್ಲ ನೆನಪಿಸಿಕೊಳ್ಳುತ್ತ ಕೂಡ್ರಬಾರದು ಎಂದು ಸಾವಿರ ಸಲ ಮನಸ್ಸಿನಲ್ಲಿ ಎಣಿಸುವುದಷ್ಟೇ. ಆದರೆ ಕುಳಿತಲ್ಲಿ ನಿಂತಲ್ಲೆಲ್ಲ ಗಿರಿಜತ್ತಿಗೆಗೆ ಒಂದೇ ಯೋಚನೆ. ಕಳೆದ ದಿನಗಳ ನೆನಪು ತನ್ನನ್ನು ಕಾಡಿದಷ್ಟೇ ಈ ಮಕ್ಕಳನ್ನೂ ಕಾಡಿದ್ದಿರಬಹುದೇ? ಈಗಿನ ಕಾಲದ ಮಕ್ಕಳಪ್ಪ, ಯಾರ ಮಾತನ್ನೂ ಕೇಳುವವರಲ್ಲ! ಈ ಸಿಂಗಾರವೂ ಬೇಡ, ಬಂಗಾರವೂ ಬೇಡ, ಮದುವೆಗೆ ಹೋಗುವುದೇ ವಜ್ಜೆ ಎನ್ನಿಸತೊಡಗಿತ್ತು ಗಿರಿಜತ್ತಿಗೆಗೆ. ಎಲ್ಲವೂ ಸರಿಯಾಗಿಯೇ ನಡೆದಿದ್ದರೆ ತಮ್ಮನೆಗೇ ಬರಬೇಕಾದ ಹುಡುಗಿ ಈಗ ಬಂಗಾರಿಯ ಮನೆಯ ಸೊಸೆಯಾಗಿ ಹೋಗುತ್ತಿದ್ದಾಳೆ. ಕಳೆದ ತಿಂಗಳು ಸಮಾರಾಧನೆಯಲ್ಲಿ ಸಿಕ್ಕಿದ್ದ ಬಂಗಾರಿ ತನ್ನ ಸೊಸೆಯಾಗುವವಳನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದಾಗ ಗಿರಿಜತ್ತಿಗೆಗೆ ಹೇಗಾಗಿರಬೇಡ!

'ರಾಧಾ ಸೊಸೆಯಾಗಿ ಬರುತ್ತಿದ್ದಾಳೆ ಎಂದಾದರೆ ಯಾವುದೋ ಜನ್ಮದ ಪುಣ್ಯ ನಮ್ಮದು' ಮಣ್ಣು ಮಸಿ ಎಂದೆಲ್ಲ ಗುಂಪಿನಲ್ಲಿ ಬಂಗಾರಿ ಡೌಲು ಹಾರಿಸಿದ್ದೇ ಹಾರಿಸಿದ್ದು. ತನ್ನ ಜಾಗವನ್ನು ಬಂಗಾರಿ ಕಸಿದುಕೊಂಡಳು ಎಂದು ನಾಲ್ಕು ದಿನ ಕೊತ ಕೊತ ಬಂಗಾರಿಯ ಮೇಲೆ ಕುದಿದಿದ್ದಳು ಗಿರಿಜತ್ತಿಗೆ.

ಹಾಗೆ ಹೇಳಲು ಹೊರಟರೆ ಯಾರ ಮೇಲೆ ಅಂತ ಕೋಪಿಸಿಕೊಳ್ಳುವುದು. ಬಿಕ್ಕಿ ಬಿಕ್ಕಿ ಅಳುತ್ತ, 'ಅತ್ತೆ ನಿನ್ನ ಮಗ ತುಂಬಾ ಒಳ್ಳೆಯವನು, ಅವನೆದುರು ನಾನು ಯಾವತ್ತಿಗೂ ಚಿಕ್ಕವಳೇ' ಎಂದು ಅರ್ಧ ತಾಸು ಫೋನಿನಲ್ಲಿ ಬರೀ ಅಳುತ್ತ ಹಾಗೆಯೇ ಮಾತು ಮುಗಿಸಿದ ರಾಧಾಳ